# 1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 13/2025

ದಿನಾಂಕ – 08.07.2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಮಹೇಶ | ಪ್ರಾ.ಸಾ. | – | 09 |
| ತಂದೆ ಹೆಸರು | – | ನಲ್ಲಜವರಯ್ಯ | ಚಾ.ಸಾ. | – | 11 |
| ವಯಸ್ಸು | – | 31 ವರ್ಷ | | | |
| ಉದ್ಯೋಗ | – | ಮೊಬೈಲ್ ಶಾಪ್ | | | |
| ವಾಸ ಸ್ಥಳ | – | ಚಳ್ಳಕೆರೆ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಸರ್ಕಾರಿ ಅಭಿಯೋಜಕರಿಂದ –**

ನನಗೆ ಈ ಕೇಸಿನ ಚಾಸಾ–5 ಇವರು ಗೊತ್ತಿರುವುದಿಲ್ಲ, ಆದರೆ ಚಾಸಾ–10 ಇವರು ಗೊತ್ತಿರುತ್ತಾರೆ.

ಈಗ ನೋಡುತ್ತಿರುವ ನಿಪಿ–6 ರಲ್ಲಿರುವ ಸಹಿ ನನ್ನದೇ ಇರುತ್ತದೆ. ಸದರಿ ಸಾಕ್ಷಿ ಗುರುತಿಸಿದ ಸಹಿಯನ್ನು ಈಗ ನಿಪಿ–6(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಈಗ್ಗೆ ಅಂದಾಜು ಒಂದು ವರ್ಷದ ಹಿಂದೆ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲೀಸರು ನನ್ನ ಸಮಕ್ಷಮ ಚಾಸಾ–5 ಇವರು ಹಾಜರುಪಡಿಸಿದ ಯಾವುದೇ ಬಟ್ಟೆಗಳನ್ನು ಪಂಚನಾಮೆಯಡಿ ಜಪ್ತುಗೊಳಿಸಿರುವುದಿಲ್ಲ. ನಿಪಿ–7 ಮತ್ತು 8 ಎಂದು ಗುರುತಿಸಿದ ಫೋಟೋಗಳನ್ನು ಪೋಲೀಸರು ಏಕೆ ತೆಗೆಸಿರುವರು ಎಂದು ನನಗೆ ಗೊತ್ತಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)*

**– ಪಾಟೀ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ –**

ದಿಃ 25.11.2024 ರಂದು ಚಳ್ಳಕೆರೆ ಪೋಲೀಸರು ನನ್ನನ್ನು ಮತ್ತು ಚಾಸಾ–10 ಇವರನ್ನು ಮಧ್ಯಾಹ್ನ 12.00 ಗಂಟೆಗೆ ಠಾಣೆಗೆ ಕರೆಯಿಸಿದ್ದು, ಆ ವೇಳೆಯಲ್ಲಿ ಚಾಸಾ–5 ಹಾಜರಿದ್ದು, ಅವರನ್ನು ಪೋಲೀಸರು

ನಮಗೆ ತೋರಿಸಿ ಅವರು ಹಾಜರುಪಡಿಸುವ ವಸ್ತುವನ್ನು ಪಂಚನಾಮೆಯಡಿ ಜಪ್ತುಗೊಳಿಸಬೇಕಾಗಿದ್ದು, ಅದರಿಂದ ಪಂಚರೆಂದು ಇರುವಂತೆ ನನಗೆ ಮತ್ತು ಚಾಸಾ–10 ಇವರಿಗೆ ಹೇಳಿದ್ದು, ಆಗ ನಾವು ಅದಕ್ಕೆ ಒಪ್ಪಿದ್ದು, ಆ ವೇಳೆಯಲ್ಲಿ ಚಾಸಾ–5 ಇವರು ಒಂದು ಹರಿದಿರುವ ರಕ್ತಹತ್ತಿದ ಟೀಷರ್ಟ, ಹರಿದಿರುವ ರಕ್ತಹತ್ತಿದ ಬನಿಯನ್, ರಕ್ತಹತ್ತಿದ ಒಂದು ಪ್ಯಾಂಟ್ ಹಾಗೂ ಚಡ್ಡಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಪೋಲೀಸರು ಮುಂದಿನ ಕ್ರಮಕ್ಕೆ ತಮ್ಮ ತಾಬಾಕ್ಕೆ ತೆಗೆದುಕೊಂಡ ಬಗ್ಗೆ ನಮ್ಮ ಸಮಕ್ಷಮ ಮಧ್ಯಾಹ್ನ 12.15 ರಿಂದ 1.00 ಗಂಟೆ ವರೆಗೆ ನಿಪಿ–6 ರಂತೆ ಪಂಚನಾಮೆ ಮಾಡಿ ಆ ವೇಳೆಯಲ್ಲಿ ನಿಪಿ–7 ರಿಂದ 10 ಎಂದು ಗುರುತಿಸಿದ ಪೋಟೋಗಳನ್ನು ತೆಗೆದು, ನಿಪಿ–6 ಕ್ಕೆ ನನ್ನ ಸಹಿ ಪಡೆದಿರುವರು ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಎಂಒ–8 ರಿಂದ 11 ಎಂದು ಗುರುತಿಸಿದ ಬಟ್ಟೆಗಳು ಪಂಚನಾಮೆಯಡಿ ಜಪ್ತುಗೊಳಿಸಿದ ಬಟ್ಟೆಗಳು ಇರುವವು ಎಂದರೆ ಸರಿಯಲ್ಲ.

ಪೋಲೀಸರು ನನ್ನ ಮತ್ತು ಚಾಸಾ–10 ಇವರ ಸಮಕ್ಷಮ ನಿಪಿ–6 ರಂತೆ ಪಂಚನಾಮೆ ಮಾಡಿ, ನಿಪಿ–7 ರಿಂದ 10 ಎಂದು ಗುರುತಿಸಿದ ಪೋಟೋಗಳನ್ನು ತೆಗೆಸಿ, ಆ ವೇಳೆಯಲ್ಲಿ ಎಂಒ–8 ರಿಂದ 11 ಎಂದು ಗುರುತಿಸಿದ ಬಟ್ಟೆಗಳನ್ನು ಜಪ್ತುಗೊಳಿಸಿದ್ದು ಮತ್ತು ಅದರ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದು, ಆದರೂ ಕೂಡ ಈಗ ಆರೋಪಿಗೆ ಸಹಾಯ ಮಾಡಲು ನನಗೆ ಏನೂ ಗೊತ್ತಿಲ್ಲವೆಂದು ನಾನು ಸುಳ್ಳು ಹೇಳುತ್ತಿರುವೆನು ಎಂದರೆ ಸರಿಯಲ್ಲ.

**– ಪಾಟೀ ಸವಾಲು – ಆರೋಪಿಯ ಪರ – ಶ್ರೀಮತಿ ಕೆ.ಎಸ್.ಆರ್. ವಕೀಲರಿಂದ –**

ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.